ಇಡಿಯಾಗಿ ಅಲ್ಲ. ರ್‍ಯಾಂಡಮ್ ಹೌಸಿನಲ್ಲಿ ಕೆಲಸ ಮಾಡುತ್ತಿದ್ದಾಗ ಟೇಪ್ ರೆಕಾರ್ಡರ್ ಒಯ್ದರೆ ಕೆಲಸ ಮಾಡುವಾಗ ಏನಾದರೂ ಹೊಳೆದರೆ ರೆಕಾರ್ಡ್ ಮಾಡಬಹುದು ಅಂದುಕೊಂಡೆ. ಆದರದು ಸರಿಹೋಗಲಿಲ್ಲ. ಬರೆಯದೇ ಹೋದದ್ದು ನನ್ನದು ಅನ್ನಿಸುವುದೇ ಇಲ್ಲ. ಭಾಷೆಯ ಲಯ, ಬಳಕೆ ಇವನ್ನೆಲ್ಲ ಮತ್ತೆ ಮತ್ತೆ ತಿದ್ದಿ ಬರೆಯುತ್ತೇನೆ. ಹಾಗಿರುವಾಗ ಏನೋ ಹೊಳೆದ ತಕ್ಷಣ ನಾನೇ ಹೇಳಿ ರೆಕಾರ್ಡ್ ಮಾಡಿದ್ದರೂ ಅದನ್ನು ಹಾಗೇ ಬರೆಯಲು ನನ್ನಿಂದ ಸಾಧ್ಯವಾಗುವುದಿಲ್ಲ.

◆ **ಇನ್ನೂ ಬರೆಯುತ್ತಿರುವಾಗಲೇ ನಿಮ್ಮ ಕೃತಿಯನ್ನು ಯಾರ ಮುಂದಾದರೂ ಓದುವಿರಾ?**

ಪ್ರಕಟವಾಗುವವರೆಗೆ ಹಾಗೆ ಓದುವುದಿಲ್ಲ. ಹಾಗೆ ಓದಿದಾಗ ಆ ಕೃತಿ ಚೆನ್ನಾಗಿಲ್ಲದಿದ್ದರೂ ಚೆನ್ನಾಗಿದೆ ಎನ್ನುವ ಭಾವ ಮನಸ್ಸಿಗೆ ಬರಬಹುದು. ಬರೆಯುವಾಗ ನಾನು ಎದುರಿಸುವ ಸಂಕಷ್ಟಗಳಲ್ಲೊಂದು ಓದುಗನಿಗೆ ಕೃತಿಯಲ್ಲಿನ ಭಾಷೆ ಹೇಗೆ ತಲುಪುತ್ತದೆ ಎನ್ನುವುದು. ಪದಗಳ ಕುರಿತು, ಅದು ಹೇಳದೆ ಉಳಿಸಿಬಿಡುವ ಮೌನ, ಪದಗಳ ಲಯ ಇತ್ಯಾದಿಗಳ ಕುರಿತು ಎಚ್ಚರದಿಂದ ಇರಬೇಕಾಗುತ್ತದೆ. ನೀವು ಬರೆಯದೆ ಬಿಟ್ಟಿದ್ದು ನೀವು ಬರೆದಿರುವುದಕ್ಕೆ ಶಕ್ತಿ ತುಂಬುತ್ತಿರುತ್ತದೆ.

◆ **ಒಂದು ಪ್ಯಾರಾವನ್ನು ಎಷ್ಟು ಸಲ ತಿದ್ದಿ ಬರೆಯುವಿರಿ?**

ಆರು, ಏಳು, ಹದಿಮೂರು ಹೀಗೆ ಸಾಧ್ಯವಾದಷ್ಟು ಬಾರಿ ಮಾಡುವೆ. ಪರಿಷ್ಕರಣೆ ಮತ್ತು ಅಸಮಾಧಾನದ ಮಧ್ಯದ ಗೆರೆ ಬಹಳ ತೆಳುವಾದದ್ದು. ತಿದ್ದುವಾಗ ಅದನ್ನು ಯಾಕೆ ತಿದ್ದುತ್ತಿರುವಿರಿ ಎನ್ನುವುದನ್ನು ಅರ್ಥ ಮಾಡಿಕೊಳ್ಳುವುದು ಮುಖ್ಯ. ಆಗ ಸರಿಹೊಂದದ್ದನ್ನು ತೆಗೆದುಹಾಕಬಹುದು.

◆ **ಒಮ್ಮೆ ಪ್ರಕಟವಾದ ಮೇಲೆ ಅದನ್ನು ಇನ್ನೂ ಸ್ವಲ್ಪ ತಿದ್ದಬೇಕಾಗಿತ್ತು ಎಂದು ಎಂದಾದರೂ ಅನ್ನಿಸಿದಿಯೇ?**

ಬಹಳ ಸಲ ಅನ್ನಿಸಿದೆ.

◆ **ಪ್ರೇಕ್ಷಕರ ಮುಂದೆ ಓದುವ ಮುನ್ನ ನೀವು ಈಗಾಗಲೇ ಪ್ರಕಟಿಸಿರುವ ಕೃತಿಯ ಭಾಗಗಳನ್ನು ತಿದ್ದಿರುವಿರಾ?**

ಪ್ರೇಕ್ಷಕರಿಗಾಗಿ ಬದಲಾಯಿಸುವುದಿಲ್ಲ. ಸುಮಾರು ಇಪ್ಪತ್ತು ವರ್ಷಗಳಿಂದ ಬರೆಯುತ್ತಿದ್ದೇನೆ. ಮೊದಲಿಗಿಂತ ಈಗ ಯಾವುದು ಸೂಕ್ತ ಯಾವುದಲ್ಲ ಅನ್ನುವುದು ತಿಳಿಯುತ್ತದೆ. ಬರೆದಿರುವುದು ಅದಕ್ಕಿಂತ ಬೇರೆಯೋ ಅಥವ ಅದಕ್ಕಿಂತ ಉತ್ತಮವಾಗಿಯೋ ಅಲ್ಲ; ಅದು ಆ ಕ್ಷಣಕ್ಕೆ ದಕ್ಕಿದಷ್ಟು ಮಾತ್ರ. ಅಷ್ಟು ಮಾತ್ರವೇ ಓದುಗರಿಗೆ ಸಿಗುವುದು ಎನ್ನುವುದು ಸ್ಪಷ್ಟವಾಗಿದೆ.

◆ **ಇಪ್ಪತ್ತೈದು ವರ್ಷ ಸಂಪಾದಕಿಯಾಗಿ ಕೆಲಸ ಮಾಡಿದ್ದು ಲೇಖಕಿಯಾಗಿ ನಿಮ್ಮನ್ನು ಹೇಗೆ ಪ್ರಭಾವಿಸಿದೆ?**

ಗೊತ್ತಿಲ್ಲ. ಆದರೆ, ಪ್ರಕಾಶನ ಉದ್ಯಮದ ಬಗ್ಗೆ, ಲೇಖಕರು ಮತ್ತು ಪ್ರಕಾಶಕರ ನಡುವಿನ ಸಂಬಂಧದ ಬಗ್ಗೆ, ಸಂಪಾದಕರು ಎಷ್ಟು ಮುಖ್ಯ, ಅವರು ವಿಮರ್ಶಾತ್ಮಕವಾಗಿರುವುದು ಎಷ್ಟು ಮುಖ್ಯ ಎನ್ನುವುದನ್ನು ತಿಳಿದುಕೊಂಡೆ. ಇವೆಲ್ಲ ಮೊದಲು ಗೊತ್ತಿರಲಿಲ್ಲ.

◆ **ವಿಮರ್ಶಾತ್ಮಕವಾಗಿದ್ದೂ ನೆರವು ನೀಡುವ ಸಂಪಾದಕರು ಇದ್ದಾರೆಯೇ?**